## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/**19** |

| | | |
|---|---|---|
| ಸಾಕ್ಷಿದಾರರ ಹೆಸರು | **Suhebiya Bhanu** | |
| ತಂದೆಯ ಹೆಸರು | **Nadeem Pasha** | ಸಾಕ್ಷಿಗೆ ದಿಃ **26.04.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **12** ವರ್ಷ | |
| ಉದ್ಯೋಗ | **Student (6th standard )** | ಪಿ.ಡಬ್ಲ್ಯೂ **-06** |
| ವಾಸ ಸ್ಥಳ | **Mysuru.** | ಸಿ.ಡಬ್ಲ್ಯೂ **-11** |

## ನ್ಯಾಯಾಲಯದ ಪ್ರಶ್ನೇ

1. ಇವತ್ತು ಇಲ್ಲಿಗೆ ನೀನು ಯಾವ ವಿಷಯಕ್ಕಾಗಿ ಬಂದಿದ್ದೀರಾ ?
ಉಃ ನಾನು ನಮ್ಮ ತಾಯಿಯ ಕೊಲೆ ಕೇಸಿನಲ್ಲಿ ಸಾಕ್ಷಿ ನೀಡಲು ಬಂದಿರುತ್ತೇನೆ.

2. ಸುಳ್ಳು ಹೇಳಿದರೆ ಏನಾಗುತ್ತದೆ ?
ಉಃ ನ್ಯಾಯಾಲಯದಲ್ಲಿ ಸತ್ಯವನ್ನೇ ಹೇಳಬೇಕು ಸುಳ್ಳು ಹೇಳಬಾರದು.

ಸಾಕ್ಷಿಯು ತನ್ನ ವಯಸ್ಸಿಗೆ ತಕ್ಕಂತೆ ಸಮಂಜಸವಾದ ಉತ್ತರ ಕೊಟ್ಟಿದ್ದರಿಂದ ಸಾಕ್ಷಿಯನ್ನು ಸತ್ಯಪ್ರತಿಜ್ಞೆ ಮಾಡಿಸಲಾಯಿತು. ಮುಖ್ಯವಿಚಾರಣೆ ಮಾಡಲು ಅನುಮತಿ ನೀಡಲಾಯಿತು.

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಘಟನೆ ನಡೆದಾಗ ನಾನು ಮಾನಸ ಕಾನ್ವೆಂಟ್‌ನಲ್ಲಿ 4 ನೇ ತರಗತಿಯಲ್ಲಿ ಓದುತ್ತಿದ್ದೆನು. ನನ್ನ ಅಣ್ಣ ಮಾನಸ ಕಾನ್ವೆಂಟ್‌ನಲ್ಲಿ 5 ನೇ ತರಗತಿಯಲ್ಲಿ ಓದುತ್ತಿದ್ದನು. ಆರೋಪಿತನು ನನಗೆ ತಂದೆಯಾಗಬೇಕು. ನಾವು ಘಟನೆ ನಡೆದಾಗ ಗಾಯತ್ರಿಪುರಂ ನಲ್ಲಿ

ವಾಸವಾಗಿದ್ದೆವು. ಚಾಸ-16 ರವರು ನನ್ನ ಚಿಕ್ಕಪ್ಪ ಆಗಬೇಕು. ನಾವು ಘಟನೆ ನಡೆಯುವುದಕ್ಕಿಂತ 3 ದಿವಸದ ಹಿಂದೆ ಗಾಯತ್ರಿಪುರಂ ನಲ್ಲಿ ಇರುವ ಮನೆಯಲ್ಲಿ ಬಂದು ವಾಸವಾಗಿದ್ದೆವು.

ದಿಃ 24.07.2019 ರಂದು ಆರೋಪಿಯಾದ ನನ್ನ ತಂದೆ ಈತನು ರಾತ್ರಿ ನನ್ನ ತಾಯಿಗೆ ಅವಾಚ್ಯವಾಗಿ ಬೈದು ಹಿಂಸೆ ಕೊಟ್ಟಿರುತ್ತಾನೆ ಮತ್ತು ನನ್ನ ತಾಯಿಗೆ ಹೊಡಿ-ಬಡಿ ಮಾಡಿರುತ್ತಾನೆ. ಸದರಿ ವಿಷಯ ನಿಮ್ಮ ತಂದೆ, ತಾಯಿಗೆ ತಿಳಿಸಿದರೆ ಕೊಂದು ಹಾಕುತ್ತೇನೆ ಎಂದು ಹೆದರಿಕೆ ಹಾಕಿದನು. ರಾತ್ರಿ ಆರೋಪಿತನು ಮನೆಯಲ್ಲೇ ಮಲಗಿದನು, ದಿಃ 25.07.2019 ರಂದು ಬೆಳಿಗ್ಗೆ 10.00 ಗಂಟೆಗೆ ನನ್ನನ್ನು ಮತ್ತು ನನ್ನ ಸಹೋದರನನ್ನು ನಮ್ಮ ತಾಯಿ ಶಾಲೆಗೆ ಕಳುಹಿಸಿದರು. ಶಾಲೆಗೆ ನಮ್ಮನ್ನು ಬಿಟ್ಟು ನಮ್ಮ ತಾಯಿ ಮನೆಗೆ ಹೋದರು, ಮಧ್ಯಾಹ್ನ ನಮ್ಮ ಅಜ್ಜ ಮೊಹಮ್ಮದ ಇಸ್ಮಾಲ್ ಬಂದು ನಿಮ್ಮ ತಾಯಿಯ ಕೊಲೆ ಆಗಿದೆ ಎಂದು ನನ್ನನ್ನು ಮತ್ತು ನನ್ನ ತಮ್ಮನನ್ನು ಶಾಲೆಯಿಂದ ಕರೆದುಕೊಂಡು ಹೋದರು. ನಾವು ಮನೆಗೆ ಬಂದು ನೋಡಿದಾಗ ನಮ್ಮ ತಾಯಿಯ ಕುತ್ತಿಗೆಯಿಂದ ರಕ್ತ ಬರುತ್ತಿತ್ತು ಅವಳು ಮೃತಪಟ್ಟಿದ್ದಳು, ನಾನು ನಮ್ಮ ತಾಯಿ ಕೊಲೆಯಾದ ಬಗ್ಗೆ ನ್ಯಾಯಾಲಯದಲ್ಲಿ ಕಲಂ 164 ಅಡಿಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ಗಾಯತ್ರಿಪುರಂ ನಲ್ಲಿ ಇರುವ ಮನೆಗೆ ಬರುವಕ್ಕಿಂತ ಮೊದಲು ನಾವು ನಮ್ಮ ಅಜ್ಜಿಯ ಮನೆಯಲ್ಲಿ ಇದ್ದೆವು ಅಲ್ಲಿ ಕೂಡಾ ಆರೋಪಿತನು ಮನೆಗೆ ಬಂದು ನಮ್ಮ ತಾಯಿ ಗರ್ಭಿಣಿ ಇದ್ದಾಗ ಹೊಟ್ಟೆಗೆ ಕಾಲಿನಿಂದ ಒದ್ದು ಹೋಗಿದ್ದನು.

**<u>ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-</u>**

ಸಕಾರಣವಿಲ್ಲದೆ ಸಮಯ ಕೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು